525(1078) ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕ್ ವ್ಯಾಪ್ತಿಯಲ್ಲಿ ಹಾಗೂ ಗೋಣಿ ಕೊಪ್ಪದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ ಕಳೆದ 3 ವರ್ಷಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಮಾಡಲಾಗಿರುತ್ತದೆ;

ಆ) ಇದಕ್ಕಾಗಿ ಎಷ್ಟು ಹಣ ವೆಚ್ಚ ಮಾಡಲಾಗಿದೆ (ವಿವರ ನೀಡುವುದು);

ಇ) ಈ ಕಾಮಗಾರಿಗಳಲ್ಲಿ ಹಲವು ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ;

ಉ) 2004–05ನೇ ಸಾಲಿನಲ್ಲಿ ಸರ್ಕಾರ ಯಾವ ಕಾಮಗಾರಿಗಳನ್ನು ಕೈಗೊಳ್ಳಲಿದೆ (ವಿವರ ನೀಡಿ); ಶಾಸಕರ ನಿಧಿಯಿಂದ ಪಡೆದಿರುವ ರೂ. 50 ಸಾವಿರ ಹಣದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತದೆಯೇ; ಹಾಗಿದ್ದಲ್ಲಿ, ಅವು ಯಾವುವು ಮತ್ತು ಎಂದು ಪ್ರಾರಂಭವಾಗುತ್ತವೆ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) 2002–03ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಒಟ್ಟು ರೂ.70.35 ಲಕ್ಷಗಳ ಮೊತ್ತದ 12 ಕಾಮಗಾರಿಗಳು ಅನುಮೋದನೆಯಾಗಿದ್ದು, ಈ ಕಾಮಗಾರಿಗಳ ಪೈಕಿ ರೂ. 5735 ಲಕ್ಷಗಳಲ್ಲಿ 9 ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ಜರುಗಿಸಿದ್ದು, ಇವುಗಳಲ್ಲಿ ರೂ. 3.37 ಲಕ್ಷಗಳ ಮೊತ್ತದ 2 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

2002–03ನೇ ಸಾಲಿನ ನಿಯಮ 60ಸಿ ಅಡಿಯಲ್ಲಿ ಒಟ್ಟು ರೂ. 10.00 ಲಕ್ಷಗಳ ಮೊತ್ತದ 15 ರಸ್ತೆ ಸುಧಾರಣೆ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆಯಾಗಿದ್ದು, ಈ ರಸ್ತೆ ಸುಧಾರಣೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ರೂ. 16.98 ಲಕ್ಷಗಳು (ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ).

ಇ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) 2004–05ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಒಟ್ಟು 17 ಕಾಮಗಾರಿಗಳನ್ನು ಮೊತ್ತ ರೂ. 57.00 ಲಕ್ಷಗಳಲ್ಲಿ ಕೈಗೊಳ್ಳಲು ಅನುಮೋದನೆಯನ್ನು ನೀಡಲಾಗಿದೆ. ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ ಹಾಗೂ ಆರ್.ಐ.ಡಿ.ಎಫ್– ಯೋಜನೆಯಡಿಯಲ್ಲಿ ಒಂದು ಗ್ರಾಮೀಣ ಕಾಮಗಾರಿಯನ್ನು ಅಭಿವೃದ್ಧಿಪಡಿಸಲು ಅನುಮೋದನೆ ನೀಡಲಾಗಿದೆ.

ಅನುಬಂಧ–1

ಕೊಡಗು ಜಿಲ್ಲೆ ವಿರಾಜಪೇಟೆ ವ್ಯಾಪ್ತಿಯಲ್ಲಿ ಹಾಗೂ ಗೋಣಿ ಕೊಪ್ಪದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ಕಾಮಗಾರಿಗಳು

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಷರಾ
2002–03ನೇ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಕೈಗೊಂಡ ಕಾಮಗಾರಿಗಳು			
1.	ಅತಿಥಿ ಗೃಹದ ಮೊದಲ ಅಂತಸ್ತಿನ ನಿರ್ಮಾಣ	13.00	ಕಾರ್ಯಾದೇಶ ನೀಡಬೇಕು.
2.	ಪ್ರಾಂಗಣದಲ್ಲಿ ತೂಕದ ಯಂತ್ರ ಅಳವಡಿಸುವ ಕಾಮಗಾರಿ	11.00	ಕಾರ್ಯಾದೇಶ ನೀಡಿದೆ
3.	ಪ್ರಾಂಗಣದಲ್ಲಿ ನೀರು ವಿತರಣಾ ನಿರ್ಮಾಣ ಹಾಗೂ ಯುಜಿಡಿ ವ್ಯವಸ್ಥೆ	12.00	ಪ್ರಗತಿಯಲ್ಲಿದೆ
4.	ನೌಕರರ ವಸತಿ ಗೃಹಗಳ ದುರಸ್ತಿ	2.00	ಕೆಲಸ ಮುಗಿದಿದೆ
5.	ಮುಖ್ಯ ಪ್ರಾಂಗಣದಲ್ಲಿ 2 ದ್ವಾರಗಳಲ್ಲಿ ಕ್ಯಾಟಲ್ ಟ್ರಾಪ್ ಅಳವಡಿಸುವ ಕಾಮಗಾರಿ	1.00	ಕಾರ್ಯಾದೇಶ ನೀಡಿದೆ
6.	ಪ್ರಾಂಗಣದಲ್ಲಿರುವ ಕಟ್ಟಡಗಳಿಗೆ ವಿದ್ಯುತ್ ಸರಬರಾಜು ಮಾಡಲು ಟ್ರಾನ್ಸ್‌ಫಾರ್ಮರ್ ಭೂಗತ ಕೇಬಲ್ ಹಾಗೂ ಪ್ಯಾನಲ್ ಬೋರ್ಡ್ ಅಳವಡಿಸುವುದು	10.00	ಅಂದಾಜು ಪಟ್ಟಿ ತಯಾರಿಸಬೇಕು
7.	ಹರಾಜು ಪಟ್ಟಿ ಸಂಖ್ಯೆ 3 ಮತ್ತು 4ಗಳನ್ನು 24 ಸಂಖ್ಯೆ ಅಂಗಡಿ ಮಳಿಗೆಗಳನ್ನಾಗಿ ಪರಿವರ್ತಿಸುವ ಕಾಮಗಾರಿಗೆ ವಿದ್ಯುತ್ ಅಳವಡಿಕೆ	1.35	ಟೆಂಡರ್ ಕರೆಯಬೇಕು
8.	ಪ್ರಾಂಗಣದಲ್ಲಿ ಕೊರೆದಿರುವ ಕೊಳವೆ ಬಾವಿಗೆ ಪಂಪ್ ಅಳವಡಿಕೆ ಮತ್ತು ಪಂಪ್‌ಹೌಸ್ ನಿರ್ಮಾಣ	2.00	ಅಂದಾಜುಪಟ್ಟಿ ತಯಾರಿಸಬೇಕು
9.	ಮುಖ್ಯರಸ್ತೆಯಿಂದ ಬ್ಯಾಂಕ್ ಮತ್ತು ಅಂಚೆ ಕಛೇರಿ ಕಟ್ಟಡಕ್ಕೆ ರಸ್ತೆ ನಿರ್ಮಾಣ	1.60	ಕೆಲಸ ಮುಗಿದಿದೆ
10.	8 ಸಂಖ್ಯೆ ಸಣ್ಣ ಅಂಗಡಿ ಮಳಿಗೆ ಎ ಬ್ಲಾಕ್ ಪಕ್ಕದಲ್ಲಿ ನೀರು ಹರಿಯಲು ಮೋರಿ ನಿರ್ಮಾಣ	0.50	ಕಾರ್ಯಾದೇಶ ನೀಡಿದೆ

1	2	3	4
11.	ಮುಖ್ಯ ಪ್ರಾಂಗಣ ಒಳ ಮತ್ತು ಹೊರ ದ್ವಾರಗಳ ನಾಮಫಟಕ ದುರಸ್ತಿ	1.00	ಕೈಬಿಡಲಾಗಿದೆ
12.	ಪ್ರಾಂಗಣದಲ್ಲಿ 12 ಸಂಖ್ಯೆ ಸಂಡ್ರಿಶಾಪ್‌ಗಳ ನಿರ್ಮಾಣ ಕಾಮಗಾರಿ	15.00	ಪ್ರಗತಿಯಲ್ಲಿದೆ
	ಒಟ್ಟು ಮೊತ್ತ ರೂ.	**70.35 ಲಕ್ಷ**	
	2002–03ನೇ ಸಾಲಿನಲ್ಲಿ ನಿಯಮ 60(ಸಿ) ಅಡಿಯಲ್ಲಿ ರಸ್ತೆ ಕಾಮಗಾರಿಗಳು		
1.	ಅರವತೋಕ್ಲು ಗ್ರಾಮದ ಹಾರ್ಟಿಕಲ್‌ಚರ್ ಮಾರ್ಗವಾಗಿ ಆಯ್ಯಣ್ಣನವರ ಮನೆ ರಸ್ತೆಯ ಅಭಿವೃದ್ಧಿ	0.76	ಕಾರ್ಯಾದೇಶ ನೀಡಬೇಕು
2.	ಬ್ಯಾಡಗ ಗ್ರಾಮ ಬಿ. ಚೂರಕಾಡು ಶಾಲಾ ರಸ್ತೆ ಗ್ರಾ.ಪಂ. ವ್ಯಾಪ್ತಿಯಿಂದ ಶಾಲೆಗೆ ಬರುವ ಮುಖ್ಯ ರಸ್ತೆಯವರೆಗೆ	0.33	ಕೆಲಸ ಮುಗಿದಿದೆ
3.	ಬಾಡಗ ಗ್ರಾಮದ ಅಯ್ಯಪ್ಪ ದೇವರ ದೇವಸ್ಥಾನಕ್ಕೆ ಹೋಗುವ ರಸ್ತೆ ಡಾಂಬರೀಕರಣ ಮುಖ್ಯ ರಸ್ತೆಯಿಂದ 0.300 ಮೀಟರ್	0.33	ಕೆಲಸ ಮುಗಿದಿದೆ
4.	ಬಾಳುಗೋಡು ಗ್ರಾಮದ ಚೇಮಿರ ಕುಟುಂಬಸ್ಥರ ಮನೆಗೆ ಹೋಗುವ ರಸ್ತೆ 130 ಮೀಟರ್‌ನಿಂದ 250 ಮೀಟರ್‌ವರೆಗೆ	0.66	ಕೆಲಸ ಮುಗಿದಿದೆ
5.	ಬಿಳೂರು ಗ್ರಾಮದ ಈಶ್ವರ ದೇವಸ್ಥಾನದ ರಸ್ತೆಯ ಕೊನೆ ಭಾಗದಿಂದ ಗದ್ದೆಗೆ ಹೊಗಳು ತೋಡಿನ ಪಕ್ಕಕ್ಕಾಗಿ ರಸ್ತೆ 0.25 ನಿಂದ 1.00 ಕಿಮೀ	1.32	ಕಾರ್ಯಾದೇಶ ನೀಡಬೇಕು
6.	ಅಮ್ಮತ್ತಿಕಾರ್ಮಾಡು ಗ್ರಾಮದ ಕಡಿಕೆ ಕೊಟ್ಟಂಡ ಕುಟುಂಬಸ್ಥರ ಐನ್ ಮನೆಗಾಗಿ ಹಾದು ಹೋಗುವ ರಸ್ತೆ 0.13 ನಿಂದ 0.60 ಕಿಮೀ	0.66	ಕೆಲಸ ಮುಗಿದಿದೆ
7.	ಪಾಲಿಬೆಟ್ಟದಿಂದ ಬಸವೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆ	0.66	ಕೆಲಸ ಮುಗಿದಿದೆ

1	2	3	4
8.	ಪರಟಗೇರಿ ಮುಖ್ಯ ರಸ್ತೆಯಿಂದ ಕಡಮ ಕೊಲಿಗೆ ಹೋಗುವ ರಸ್ತೆ ಕಡಮ ಕೊಲಿಗೆ 2001–02ನೇ ಸಾಲಿನಲ್ಲಿ ಅಳವಡಿಸಿದ ಮೋರಿನಿಂದ ಮುಖ್ಯ ರಸ್ತೆ ಕಡೆಗೆ 0.030 ಕಿಮೀ	0.66	ಕೆಲಸ ಮುಗಿದಿದೆ
9.	ವೆಸ್ಟ್ ನೆಮ್ಮಲೆ ಗ್ರಾಮದ ಈಶ್ವರ ದೇವಸ್ಥಾನದ ರಸ್ತೆಯಿಂದ ಮರಿಯಂಡ ಬೈಲು ಮೂಲಕ ಮತ್ತೋಡಿ ರಸ್ತೆ ಈಶ್ವರ ದೇವಸ್ಥಾನದ 0.20 ನಿಂದ ಗದ್ದೆಬೈಲಿಗಾಗಿ 0.50 ಕಿಮೀ	0.66	ಕೆಲಸ ಮುಗಿದಿದೆ
10.	ಅಮ್ಮತ್ತಿ ಕರ್ಮಾಡು ಕಾಪಾಡಿಯಿಂದ ಬಿಳುಗುಂದ ಗ್ರಾಮಕ್ಕೆ ಹಾದು ಹೋಗುವ ಸಾರ್ವಜನಿಕ ರಸ್ತೆಯಿಂದ ಕುಟ್ಟಂಡ ಮತ್ತು ಬಡುವಮಂಡ ಬಿನ್ ಮನೆಗಳಿಗೆ ಹೋಗುವ ರಸ್ತೆ	0.66	ಕೆಲಸ ಮುಗಿದಿದೆ
11.	ಚೇಗೂರು ಚೇನಿಕಾಡು ಗ್ರಾಮದ ಹುದಿಕೇರಿ ಅರ್ಜಿಗುಂಡಿ ರಸ್ತೆ ಯಿಂದ ಎಡಕ್ಕೆ ಕಾಯಪಂಡ ಕುಟುಂಬ ಪಾನಂ ಮಾಡು ಅಯ್ಯಪ್ಪ ದೇವರ ದೇವಸ್ಥಾನಕ್ಕೆ ಹೋಗುವ ರಸ್ತೆ ಅಯ್ಯಪ್ಪ ಸ್ವಾಮಿ ರಸ್ತೆಗೆ ತಿರುವಿನಿಂದ ಪ್ರಾರಂಭಿಸಿ 0.65 ನಿಂದ 0.45 ಕಿಮೀ ಬೇಗೂರು ಮುಖ್ಯ ರಸ್ತೆಗೆ ಹೋಗುವ ದಾರಿಗೆ ಡಾಂಬರೀಕರಣ.	0.66	ಕೆಲಸ ಮುಗಿದಿದೆ
12.	ಕುಕ್ಕೂರು ಗ್ರಾಮದ ಪಂದ್ಯಂದ ಕಳದಿಂದ ದೇವಸ್ಥಾನಕ್ಕೆ ಬರುವ ರಸ್ತೆ 0.13 ನಿಂದ 0.60 ಕಿಮೀ	0.66	ಕೆಲಸ ಮುಗಿದಿದೆ
13.	ಪಾಲಂಗಾಲ ಗ್ರಾಮದ ಬೊಳ್ಳಚ್ಚಿಮಟ್ಟಿ ರಸ್ತೆ ಪಾಲಂಗಾಲ ಗ್ರಾಮದ ಬೆಳ್ಳಚ್ಚು ತಿರುವುನಿಂದ 0.13 ನಿಂದ 0.50 ಕಿಮೀವರೆಗೆ	0.66	ಅಂದಾಜುಪಟ್ಟಿ ತಯಾರಿಸಬೇಕು

1	2	3	4
14.	ಹೈನೊಡ್ಲೂರು ಗ್ರಾಮದ ಮುಖ್ಯ ರಸ್ತೆಯಿಂದ ಕೇಚಮಾಡ ಅಶ್ವಿನಿ ಅವರ ರಸ್ತೆ	0.66	ಅಂದಾಜುಪಟ್ಟಿ ತಯಾರಿಸಬೇಕು
15.	ಹೆಬ್ಬಾಲೆ ಗ್ರಾಮದ ಪಾಲಿಬೆಟ್ಟ ತಿತಿಮತಿ ರಸ್ತೆಯಲ್ಲಿ ವಿ.ಸಿ. ಗಣೇಶರವರ ಮನೆಯ ಪಕ್ಕದಿಂದ ಹರಿಜನಕೇರಿ ರಸ್ತೆ	0.66	ಕೆಲಸ ಮುಗಿದಿದೆ
	ಒಟ್ಟು ರೂ.	**10.00 ಲಕ್ಷ**	

ಅನುಬಂಧ–2

ಕೊಡಗು ಜಿಲ್ಲೆ ವಿರಾಜಪೇಟೆ ವ್ಯಾಪ್ತಿಯಲ್ಲಿ ಹಾಗೂ ಗೋಣಿ ಕೊಪ್ಪದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ 2004–05ನೇ ಸಾಲಿನಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳು

ಕ್ರ. ಸಂ.	ಕಾಮಗಾರಿಯ ಹೆಸರು	ಮಂಜೂರಾದ ಮೊತ್ತ (ರೂ. ಲಕ್ಷಗಳಲ್ಲಿ)	ಷರಾ
1.	ಪ್ರಾಂಗಣದಲ್ಲಿ ದ್ವಾರ (1) ರಿಂದ ಡಿ ಮಾದರಿ ವಸತಿ ಗೃಹಗಳವರೆಗೆ ರಸ್ತೆಯ ಮರು ಡಾಂಬರೀಕರಣ ಒಳಗೊಂಡಂತೆ ಅಭಿವೃದ್ಧಿ ಕಾಮಗಾರಿ	4.50	ಟೆಂಡರ್ ಕರೆದಿದೆ
2.	ಪ್ರಾಂಗಣದಲ್ಲಿ ದ್ವಾರ (2) ರಿಂದ ನೌಕರರ ವಸತಿ ಗೃಹದ ಕಡೆಯಿಂದ ಡಿ ಮಾದರಿ ವಸತಿ ಗೃಹಗಳವರೆಗೆ ರಸ್ತೆಗೆ ಮರು ಡಾಂಬರೀಕರಣ ಒಳಗೊಂಡಂತೆ ಅಭಿವೃದ್ಧಿ ಕಾಮಗಾರಿ	4.50	ಟೆಂಡರ್ ಕರೆದಿದೆ
3.	ಪ್ರಾಂಗಣದಲ್ಲಿ ಯುಜೆಡಿ ವ್ಯವಸ್ಥೆಯ ಸೆಪ್ಟಿಕ್ ಟ್ಯಾಂಕ್ ಬೋರ್‌ವೆಲ್ ಮತ್ತು ಪಂಪ್‌ಹೌಸ್‌ಗೆ ಸಂಪರ್ಕ ರಸ್ತೆ ಮತ್ತು	3.00	ಟೆಂಡರ್ ಕರೆದಿದೆ
	ನಿವೇಶನ ಪ್ರತ್ಯೇಕತೆಗೆ ಫೆನ್ಸಿಂಗ್ ಅಳವಡಿಕೆ ಹಾಗೂ ಸೆಪ್ಟಿಂಗ್ ಟ್ಯಾಂಕ್‌ನಿಂದ ವೇಸ್ಟ್ ಡಿಸ್ಪೋಸಲ್ ವ್ಯವಸ್ಥೆ	3.00	ಟೆಂಡರ್ ಕರೆದಿದೆ
4.	ಪ್ರಾಂಗಣದಲ್ಲಿ ಅತಿಥಿ ಗೃಹದ ಹಿಂಭಾಗ ವಾಹನ ನಿಲುಗಡೆ ತಾಣ	3.00	ಟೆಂಡರ್ ಕರೆದಿದೆ

1	2	3	4
5.	ಪ್ರಾಂಗಣದಲ್ಲಿ ಗೋದಾಮುಗಳ ಮೇಲೆ ಮತ್ತು ಅಂಗಡಿ ಮಳಿಗೆಗಳ ಮುಂದೆ ವಾಹನ ನಿಲುಗಡೆ ತಾಣ	1.00	ಟೆಂಡರ್ ಕರೆದಿದೆ
6.	ಕ್ಯಾಂಟೀನ್ ಎದುರುಗಡೆ ಮುಖ್ಯ ರಸ್ತೆಯಿಂದ ಸಂಪರ್ಕಕ್ಕಾಗಿ ಮೋರಿಗೆ ಡೆಕ್ ಸ್ಲ್ಯಾಬ್ ಅಳವಡಿಕೆ ಮತ್ತು ಕಟ್ಟಡದ ಮುಂಭಾಗ ಬೇಸ್‌ಮೆಂಟ್ ಒದಗಿಸುವುದು	1.00	ಕಾರ್ಯಾದೇಶ ನೀಡಬೇಕು
7.	ಅತಿಥಿಗೃಹ ಕಟ್ಟಡದ ಶೌಚಾಲಯಗಳಿಗೆ ಟೈಲ್ಸ್ ಅಳವಡಿಕೆ, ಗೋಡೆಗಳಿಗೆ, ಚಟ್ಟಾಗಳಿಗೆ ದುರಸ್ತಿ ಕಾಮಗಾರಿ ಕಟ್ಟಡಕ್ಕೆ ಪ್ರೈಮರ್ ಕೋಟ್ ಲೇಪನದೊಂದಿಗೆ ಬಣ್ಣ ಲೇಪನ ಮತ್ತು ಕೊಠಡಿ ಸಂಖ್ಯೆ 1 ಮತ್ತು2 ಕ್ಕೆ ದಾಲ್ ಪ್ಯಾನ್‌ಲಿಂಗ್ ಒಳಗೊಂಡಂತೆ ಅಬಿವೃದ್ಧಿ ಕಾಮಗಾರಿ ಸೋಲಾರ್ ವಾಟರ್ ಹೀಟರ್ ಒಳಗೊಂಡಂತೆ	4.00	ಟೆಂಡರ್ ಕರೆದಿದೆ
8.	ಡಿ ಮಾದರಿಯ ವಸತಿ ಗೃಹಕ್ಕೆ ಕಾಂಪೌಂಡ್ ಮತ್ತು ಗೇಟ್ ಅಳವಡಿಕೆ	1.00	ಕಾರ್ಯಾದೇಶ ನೀಡಬೇಕು
9.	10 ಸಂಖ್ಯೆ ಶಾಪ್–ಕಂ–ಗೋದಾಮುಗಳಿಗೆ ಮುಖ್ಯ ರಸ್ತೆಯಿಂದ ಕಾಂಕ್ರೀಟ್ ರಸ್ತೆ ನಿರ್ಮಾಣ	1.00	ಕಾರ್ಯಾದೇಶ ನೀಡಬೇಕು
10.	4 ಸಂಖ್ಯೆ, 100 ಎಂ.ಟಿ. ಗೋದಾಮುಗಳಿಗೆ ಮುಖ್ಯರಸ್ತೆಯಿಂದ ಸಂಪರ್ಕ ರಸ್ತೆ ನಿರ್ಮಾಣ	1.00	ಕಾರ್ಯಾದೇಶ ನೀಡಬೇಕು
11.	3 ಸಂಖ್ಯೆ ಅಂಗಡಿ ಮಳಿಗೆಗಳಿಗೆ ಎ ಬ್ಲಾಕ್ ಗೋಡೆಗಳಿಗೆ ಪ್ರಥಮ ಲೇಪನ ಒಳಗೊಂಡಂತೆ ಬಣ್ಣ ಲೇಪನ ಮತ್ತು ರೋಲಿಂಗ್ ಶೆಟರ್ ಮತ್ತು ಕಿಟಕಿಗಳಿಗೆ ದುರಸ್ತೆ	1.00	ಕಾರ್ಯಾದೇಶ ೀಡಬೇಕು
12.	200 ಎಂ.ಟಿ. ಗೋದಾಮು 1 ಮತ್ತು 2 (ಎನ್‌ಜಿಆರ್‌ಜಿ)ಗೆ ದುರಸ್ತೆ ಕಾಮಗಾರಿ ರೋಲಿಂಗ್ ಶೆಟರ್ ಕಿಟಕಿ ದುರಸ್ತೆ ಮತ್ತು ವಿದ್ಯುತ್ ಉಪಕರಣಗಳ ದುರಸ್ತಿ	1.00	ಅಂದಾಜುಪಟ್ಟಿ ಸಲ್ಲಿಸಬೇಕು

1	2	3	4
13.	8 ಸಂಖ್ಯೆ ಅಂಗಡಿ ಮಳಿಗೆ ಬಿ ಬ್ಲಾಕ್‌ಗೆ ವಾರ್ಷಿಕ ದುರಸ್ತಿ ಕಾಮಗಾರಿ	1.00	ಅಂದಾಜುಪಟ್ಟಿ ಸಲ್ಲಿಸಬೇಕು
14.	ಪ್ರಾಂಗಣದಲ್ಲಿ ರೈತರ ಅಡಮಾನ ಸಾಲ ಉಪಯೋಗಕ್ಕೆ ವೈಜ್ಞಾನಿಕ ಮಾದರಿ 100 ಎಂ.ಟಿ. 2 ಸಂಖ್ಯೆ ಗೋದಾಮುಗಳ ನಿರ್ಮಾಣ	26.00	ಅಂದಾಜುಪಟ್ಟಿ ಪರಿಶೀಲನೆಯಲ್ಲಿದೆ
15.	ಪ್ರಾಂಗಣದಲ್ಲಿ ಸಾರ್ವಜನಿಕ ಉಪಯುಕ್ತತೆಗೆ ಕುಡಿಯುವ ನೀರಿನ ವ್ಯವಸ್ಥೆಯ ಪ್ಲಾಟ್ ಫಾರಂಗಳು ಗೋದಾಮುಗಳ ಮುಂದೆ	1.00	ಕಾರ್ಯಾದೇಶ ನೀಡಬೇಕು
16.	ಪ್ರಾಂಗಣದಲ್ಲಿ ಸಾರ್ವಜನಿಕ ಉಪಯುಕ್ತತೆಗೆ ಕುಡಿಯುವ ನೀರಿನ ಪ್ಲಾಟ್ ಫಾರಂಗಳು ಅಂಗಡಿ ಮಳಿಗೆಗಳ ಮುಂದೆ ಹಾಗೂ ಸಂಡ್ರಿಶಾಪ್ ಬಳಿ	1.00	ಕಾರ್ಯಾದೇಶ ನೀಡಬೇಕು
17.	ಪ್ರಾಂಗಣದಲ್ಲಿ ಆಡಳಿತ ಕಛೇರಿ ವಾರ್ಷಿಕ ದುರಸ್ತಿ (1998–99ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಿಂದ ಕೈಬಿಟ್ಟು ಈ 2004–05ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಸೇರಿದೆ)	2.00	ಪ್ರಗತಿಯಲ್ಲಿದೆ
	ಒಟ್ಟು ಮೊತ್ತ	ರೂ. 57.00 ಲಕ್ಷ	

ಮುಂದುವರೆದು, ಆರ್‌ಐಡಿಎಫ್–IXರ ಯೋಜನೆಯಡಿಯಲ್ಲಿ ಗೋಣಿಕೊಪ್ಪಲು ಗ್ರಾಮೀಣ ಸಂತೆಯನ್ನು ಅಂದಾಜು ಮೊತ್ತ ರೂ. 15.00 ಲಕ್ಷಗಳಲ್ಲಿ ಅಭಿವೃದ್ಧಿಪಡಿಸಲು ಅನುಮೋದನೆಯನ್ನು ನೀಡಲಾಗಿದೆ. ಟೆಂಡರ್ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.